ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 31-03-1990.

# *ದಯಾಹೃದಯ ಹಾಗೂ ಬೇಹದ್ದಿನ ವೈರಾಗ್ಯವೃತ್ತಿ.*

(रहमदिल और बेहद की वैराग वृत्ति)

**ಶಿವಪರಮಾತ್ಮ ಈ ಭೂಮಿಯ ಮೇಲೆ ಅವತರಿಸಿ ಜ್ಞಾನ, ಯೋಗಗಳಿಂದ ಧರ್ಮಸ್ಥಾಪನೆಯನ್ನು ಮಾಡುತ್ತಿದ್ದಾರೆ.**

ಮುರಳಿಯನ್ನು ಓದಬೇಕಾದರೆ ಆತ್ಮಿಕ ಸ್ಥಿತಿಯಲ್ಲಿದ್ದು ತಂದೆಯೊಂದಿಗೆ ಶಿಕ್ಷಕನ ಸಂಬಂಧವನ್ನು ಜೋಡಿಸಿ ಈಶ್ವರೀಯ ವಿದ್ಯಾರ್ಥಿಯ ಸ್ಥಿತಿಯಲ್ಲಿದ್ದು ಮಹಾವಾಕ್ಯಗಳನ್ನು ಆತ್ಮಕ್ಕೆ ಅನ್ವಯಿಸಿಕೊಂಡು ಓದಿದಾಗ ಮುರಳಿ ಅರ್ಥವಾಗುತ್ತದೆ. ಅದಕ್ಕಾಗಿ ನಾವು ಮಾಡಬೇಕಾಗಿರುವ ಸಂಕಲ್ಪಗಳು.

• ನಾನಾತ್ಮ ನಿರಾಕಾರ ಜ್ಯೋತಿರ್ಬಿಂದು ಸ್ವರೂಪ ಶಿವಪರಮಾತ್ಮನನ್ನ ತಂದೆ.

• ನಾನು ಈಶ್ವರೀಯ ವಿದ್ಯಾರ್ಥಿ, ಶಿವ ಪರಮಾತ್ಮ ನನಗೆ ಟೀಚರ್ ಅಥವಾ ಶಿಕ್ಷಕ.

• ಶಿವಪರಮಾತ್ಮ ನನಗೆ ಸದ್ಗುರು, ನಾನು ಮಾಸ್ಟರ್ ಸದ್ಗುರು.

• ಶಿವಪರಮಾತ್ಮ ನನಗೆ ಜೀವನ ಸಂಗಾತಿ, ನಾನು ಶಿವ ಪರಮಾತ್ಮನಿಗೆ ಜೀವನ ಸಂಗಾತಿ.

ಇಂದು ಪ್ರೇಮಸಾಗರ ಮತ್ತು ದಯಾಸಾಗರನಾದ ಬಾಪ್‌ದಾದಾ ತಮ್ಮ ಸಮಾನ ಮಕ್ಕಳನ್ನು ನೋಡುತ್ತಿದ್ದಾರೆ. ಇಂದು ಬಾಪ್‌ದಾದಾ ವಿಶ್ವದ ಸರ್ವ ಅಪರಿಚಿತ ಮಕ್ಕಳನ್ನು ನೋಡುತ್ತಿದ್ದರು. ಭಲೆ ಅಪರಿಚಿತರಾಗಿದ್ದಾರೆ ಆದರೆ ಎಲ್ಲರೂ ಮಕ್ಕಳಾಗಿದ್ದಾರೆ. ಬಾಪ್‌ದಾದಾರವರ ಸಂಬಂಧದಿಂದ ಸರ್ವಮಕ್ಕಳನ್ನು ನೋಡುತ್ತಾ ಏನು ಅನುಭವ ಮಾಡಿದರೆಂದರೆ - ಮೆಜಾರಿಟಿ ಆತ್ಮರಿಗೆ ಸಮಯ ಪ್ರತಿಸಮಯ ಯಾವುದಾದರೊಂದು ಕಾರಣದಿಂದ ತಿಳಿದೋ ಅಥವಾ ತಿಳಿಯದೆಯೋ ವರ್ತಮಾನ ಸಮಯದಲ್ಲಿ ದಯೆ ಹಾಗೂ ಕರುಣೆಯ ಅವಶ್ಯಕತೆಯಿದೆ ಮತ್ತು ಅವಶ್ಯಕತೆಯ ಕಾರಣದಿಂದಲೇ ದಯಾಹೃದಯಿ ತಂದೆಯನ್ನು ನೆನಪು ಮಾಡುತ್ತಾ ಇರುತ್ತಾರೆ ಅಂದಮೇಲೆ ನಾಲ್ಕಾರು ಕಡೆಯ ಅವಶ್ಯಕತೆಯ ಪ್ರಮಾಣ ಈ ಸಮಯದಲ್ಲಿ ದಯಾದೃಷ್ಟಿಯ ಕೂಗು ಇದೆ ಏಕೆಂದರೆ ಒಂದನೆಯದಾಗಿ ಭಿನ್ನ-ಭಿನ್ನ ಸಮಸ್ಯೆಗಳ ಕಾರಣ ತಮ್ಮ ಮನಸ್ಸು ಮತ್ತು ಬುದ್ಧಿಯ ಸಮತೋಲನೆ ಇಲ್ಲದಿರುವ ಕಾರಣ ದಯಾಹೃದಯಿ ತಂದೆಯನ್ನೂ ಮತ್ತು ತಮಗೆ ಇಷ್ಟವಾದವ(ಇಷ್ಟದೇವ)ರನ್ನು ದಯೆಗಾಗಿ ಬಹಳ ದುಃಖದಿಂದ ಬಹಳ ವ್ಯಾಕುಲರಾಗಿ ಕರೆಯುತ್ತಾ ಇರುತ್ತಾರೆ.ಭಲೆ ಅಪರಿಚಿತ(ಅಜ್ಞಾನಿ) ಆತ್ಮರು ತಂದೆಯನ್ನು ಅರಿತುಕೊಳ್ಳದ ಕಾರಣ ತಮ್ಮ ಧರ್ಮಪಿತರು ಹಾಗೂ ಗುರುಗಳನ್ನು ಮತ್ತು ಇಷ್ಟದೇವರನ್ನು ದಯಾಹೃದಯಿಗಳೆಂದು ತಿಳಿದು ಕರೆಯುತ್ತಾರೆಆದರೆ ತಾವೆಲ್ಲರೂ ತಿಳಿದುಕೊಂಡಿದ್ದೀರಿ- ಈ ಸಮಯದಲ್ಲಿ ಒಬ್ಬ ತಂದೆ ಪರಮ ಆತ್ಮನ ವಿನಃ ಮತ್ತಾವುದೇ ಆತ್ಮನ ಮೂಲಕ ದಯೆ ಸಿಗಲು ಸಾಧ್ಯವಿಲ್ಲ. ಭಲೆ ತಂದೆಯು ಅವರ ಇಚ್ಛೆಗಳನ್ನು ಪೂರ್ಣ ಮಾಡಲು, ಭಾವನೆಯ ಫಲವನ್ನು ಕೊಡುವುದಕ್ಕಾಗಿ ಯಾವುದೇ ಇಷ್ಟದೇವನನ್ನು ಅಥವಾ ಮಹಾನ್ ಆತ್ಮರನ್ನು ನಿಮಿತ್ತ ಮಾಡಬಹುದು ಆದರೆ ದಾತನಂತೂ ಒಬ್ಬ ತಂದೆಯೇ ಆಗಿದ್ದಾರೆ ಆದ್ದರಿಂದ ವರ್ತಮಾನ ಸಮಯದ ಪ್ರಮಾಣ ದಯಾಹೃದಯಿ ತಂದೆಯು ಮಕ್ಕಳಿಗೂ ಸಹ ಇದನ್ನೇ ಹೇಳುತ್ತೇವೆ - ತಂದೆಯ ಸಹಯೋಗಿ ಜೊತೆಗಾರ ಭುಜಗಳು ತಾವು ಬ್ರಾಹ್ಮಣ

ಮಕ್ಕಳೇ ಆಗಿದ್ದೀರಿ ಅಂದಾಗ ಮನುಷ್ಯರಿಗೆ ಯಾವ ವಸ್ತುವಿನ ಅವಶ್ಯಕತೆಯಿದೆಯೋ ಅದನ್ನು ಕೊಟ್ಟರೆ ಪ್ರಸನ್ನರಾಗಿಬಿಡುತ್ತಾರೆ ಅಂದಮೇಲೆ ಮಾಸ್ಟರ್ ದಯಾಹೃದಯಿಗಳಾಗಿದ್ದೀರಾ? ತಮ್ಮದೇ ಸಹೋದರ-ಸಹೋದರಿಯರಾಗಿದ್ದಾರೆ. ಸ್ವಂತ ಮಕ್ಕಳಿರಲಿ. ಮಲತಾಯಿ ಮಕ್ಕಳಾಗಿರಲಿ ಆದರೆ ಒಂದೇ ಪರಿವಾರದವರಲ್ಲವೆ. ತಮ್ಮ ಪರಿವಾರದ ಅಪರಿಚಿತ ಬೇಸತ್ತ ಆತ್ಮರಪ್ರತಿ ದಯಾಹೃದಯಿಗಳಾಗಿರಿ. ಅಂತರಾಳದಿಂದ ದಯೆ ಮೂಡಿಬರಲಿ. ವಿಶ್ವದ ಅಪರಿಚಿತ ಆತ್ಮರಿಗೂ ದಯೆಬೇಕಾಗಿದೆ, ಜೊತೆಜೊತೆಗೆ ಬ್ರಾಹ್ಮಣ ಪರಿವಾರದ ಪುರುಷಾರ್ಥದ ತೀವ್ರಗತಿಗಾಗಿ ಹಾಗೂ ಸ್ವ-ಉನ್ನತಿಗಾಗಿಯೂ ದಯಾಹೃದಯದ ಅವಶ್ಯಕತೆಯಿದೆ. ಉನ್ನತಿಗಾಗಿ ಯಾವಾಗ ಸ್ವಯಂನ ಮೇಲೆ ದಯಾಹೃದಯಿಗಳಾಗುತ್ತೀರೋ ಆಗ ದಯಾಹೃದಯಿ ಆತ್ಮಗೆ ಸದಾ ಬೇಹದ್ದಿನ ವೈರಾಗ್ಯವೃತ್ತಿಯು ಸ್ವತಹ ಬರುತ್ತದೆ. ಸ್ವಯಂನ ಪ್ರತಿಯೂ ದಯೆ ಬರಲಿ- ನಾನು ಎಷ್ಟು ಶ್ರೇಷ್ಠಾತಿಶ್ರೇಷ್ಠ ತಂದೆಯ ಅದೇ ಆತ್ಮನಾಗಿದ್ದೇನೆ ಮತ್ತು ತಂದೆಯ ಸಮಾನನಾಗುವ ಅದೇ ಲಕ್ಷ್ಯಧಾರಿಯಾಗಿದ್ದೇನೆ. ಅದರಪ್ರಮಾಣ ಮೂಲಶ್ರೇಷ್ಠ ಸ್ವಭಾವ ಹಾಗೂ ಸಂಸ್ಕಾರದಲ್ಲಿ ಒಂದುವೇಳೆ ಯಾವುದೇ ಕೊರತೆಯಿದ್ದರೆ ತನ್ನ ಮೇಲಿನ ಹೃದಯದ ದಯೆ ಬಲಹೀನತೆಗಳಿಂದ ಸಹಜವಾಗಿ ವೈರಾಗ್ಯ ತರಿಸುತ್ತದೆ.

ಬಾಪ್‌ದಾದಾ ಇಂದು ಇದನ್ನೇ ವಾರ್ತಾಲಾಪ ಮಾಡುತ್ತಿದ್ದರು- ಎಲ್ಲಾ ಮಕ್ಕಳು ಜ್ಞಾನದಲ್ಲಂತೂ ಬಹಳ ಬುದ್ಧಿವಂತರಾಗಿದ್ದಾರೆ. ಪಾಯಿಂಟ್ ಸ್ವರೂಪರಂತೂ ಆಗಿಬಿಟ್ಟಿದ್ದಾರೆ ಆದರೆ ಪ್ರತಿಯೊಂದು ನಿರ್ಬಲತೆಯನ್ನು ತಿಳಿದುಕೊಳ್ಳುವ ಪಾಯಿಂಟ್ಸ್ (ಜ್ಞಾನಬಿಂದುಗಳು) ಎಲ್ಲರ ಬಳಿಯಿದೆ. ಈ ರೀತಿಯಿರಬೇಕು- ಈರೀತಿ ಮಾಡಬಾರದು ಎಂಬುದನ್ನು ತಿಳಿದುಕೊಂಡಿದ್ದಾರೆ. ಇದನ್ನು ತಿಳಿದುಕೊಂಡಿದ್ದರೂ ಸಹ ಬಿಂದು ಸ್ವರೂಪರಾಗುವುದು ಮತ್ತು ಏನೆಲ್ಲಾ ವ್ಯರ್ಥವನ್ನು ನೋಡಿದಿರೋ, ಕೇಳಿದಿರೋ ಮತ್ತು ತನ್ನಿಂದ ಆಯಿತೋ ಅದಕ್ಕೆ ಪೂರ್ಣವಿರಾಮದ ಬಿಂದುವನ್ನು ಇಡುವುದು ಬರುವುದಿಲ್ಲ. ಜ್ಞಾನಬಿಂದುಗಳಂತೂ ಇದೆ. ಬಿಂದು ಸ್ವರೂಪರಾಗುವುದಕ್ಕಾಗಿ ವಿಶೇಷ ಯಾವುದರ ಅವಶ್ಯಕತೆಯಿದೆ? ತನ್ನಮೇಲೆ ದಯೆ ಮತ್ತು ಅನ್ಯರ ಮೇಲೆ ದಯೆ ಇರಬೇಕಾಗಿದೆ. ಭಕ್ತಿ ಮಾರ್ಗದಲ್ಲಿಯೂ ಸತ್ಯವಾದ ಭಕ್ತರನ್ನು ನೋಡಿರುತ್ತೀರಿ. ಅಥವಾ ತಾವೂ ಸಹ ಸತ್ಯಭಕ್ತರಾಗಿದ್ದಿರಿ. ಆತ್ಮದಲ್ಲಿ ರೆಕಾರ್ಡ್ ಇದೆಯಲ್ಲವೆ ಅಂದಾಗ ಸತ್ಯಭಕ್ತರು ಸದಾ ದಯಾ ಹೃದಯಿಗಳಾಗಿರುತ್ತಾರೆ ಆದ್ದರಿಂದ ಅವರು ಪಾಪಕರ್ಮ ಮಾಡಲು ಹೆದರುತ್ತಾರೆ. ತಂದೆಗೆ ಹೆದರುವುದಿಲ್ಲ ಆದರೆ ಪಾಪಕ್ಕೆ ಹೆದರುತ್ತಾರೆ ಆದ್ದರಿಂದ ಕೆಲವರು ಪಾಪಕರ್ಮ ಮಾಡುವುದರಿಂದ ಮುಕ್ತರಾಗಿರುತ್ತಾರೆ ಅಂದಾಗ ಜ್ಞಾನಮಾರ್ಗದಲ್ಲಿಯೂ ಸಹ ಯಾರು ಯಥಾರ್ಥ ದಯಾಹೃದಯಿಗಳಿದ್ದಾರೆಯೋ ಅವರಲ್ಲಿ ಮೂರು ಮಾತುಗಳಿಂದ ದೂರವಿರುವ ಶಕ್ತಿಯಿರುತ್ತದೆ. **ಯಾರಲ್ಲಿ ದಯೆ ಇರುವುದಿಲ್ಲವೋ ಅವರು ತಿಳಿದುಕೊಂಡಿದ್ದರೂ, ಅರಿತುಕೊಂಡಿದ್ದರೂ ಸಹ ಮೂರು ಮಾತುಗಳಿಗೆ ಪರವಶರಾಗಿಬಿಡುತ್ತಾರೆ. ಆ ಮೂರು ಮಾತುಗಳಾಗಿವೆ- ಉದಾಸೀನತೆ, ಈರ್ಷ್ಯೆ ಮತ್ತು ತಿರಸ್ಕಾರ. ಯಾವುದೇ ನಿರ್ಬಲತೆ ಅಥವಾ ಕೊರತೆಗೆ ಕಾರಣ 90% ಈ ಮೂರು ಮಾತುಗಳೇ ಆಗಿರುತ್ತವೆ. ಯಾರು ದಯಾಹೃದಯಿಗಳಾಗಿರುವರೋ ಅವರು ತಂದೆಗೆ ಜೊತೆಗಾರರು.** ಧರ್ಮರಾಜನ ಶಿಕ್ಷೆಯಿಂದ ದೂರವಿರುವ ಶುಭಇಚ್ಛೆಯನ್ನು ಇಟ್ಟುಕೊಳ್ಳುತ್ತಾರೆ. ಹೇಗೆ ಭಕ್ತರು ಭಯದ ಕಾರಣ ಉದಾಸೀನರಾಗುವುದಿಲ್ಲ. ಹಾಗೆಯೇ ಬ್ರಾಹ್ಮಣ ಆತ್ಮರು ತಂದೆಯ ಪ್ರೀತಿಯ ಕಾರಣ. ಧರ್ಮರಾಜಪುರಿಯಲ್ಲಿ ಹೋಗುವಂತಾಗಬಾರದು ಎಂಬ ಮಧುರಭಯದಿಂದ ಉದಾಸೀನರಾಗುವುದಿಲ್ಲ. ತಂದೆಯ ಪ್ರೀತಿಯು ಅದರಿಂದ ದೂರ ಮಾಡಿಬಿಡುತ್ತದೆ. ತನ್ನ ಹೃದಯದ ದಯೆಯು ಉದಾಸೀನತೆಯನ್ನು ಸಮಾಪ್ತಿ ಮಾಡಿಬಿಡುತ್ತದೆ ಮತ್ತು ಯಾವಾಗ ತನ್ನಪ್ರತಿ ದಯಾಭಾವನೆಯು ಬರುತ್ತದೆಯೋ ಆಗ ಎಂತಹ ವೃತ್ತಿ. ಎಂತಹ ಸ್ಮೃತಿಯೋ ಅಂತೆಯೇ ಸರ್ವಬ್ರಾಹ್ಮಣರು ಸ್ಮೃತಿಯಪ್ರತಿ ಸ್ವತಹ ದಯಾಹೃದಯಿಗಳಾಗುತ್ತಾರೆ. ಇದು ಯಥಾರ್ಥ ಜ್ಞಾನಯುಕ್ತ ದಯೆಯಾಗಿದೆ. ಜ್ಞಾನವಿಲ್ಲದ ದಯೆಯು ಕೆಲವೊಮ್ಮೆ ನಷ್ಟವನ್ನೂ ಮಾಡುತ್ತದೆ ಆದರೆ ಜ್ಞಾನಯುಕ್ತ ದಯೆಯು ಎಂದೂ ಸಹ ಯಾವುದೇ ಆತ್ಮನಪ್ರತಿ ಈರ್ಷ್ಯೆ ಅಥವಾ ತಿರಸ್ಕಾರದ ಭಾವವು ಹೃದಯದಲ್ಲಿ ಉತ್ಪನ್ನವಾಗಲು ಬಿಡುವುದಿಲ್ಲ. ಜ್ಞಾನಯುಕ್ತ ದಯೆಯ ಜೊತೆಜೊತೆಗೆ ಸ್ವಯಂನ ಆತ್ಮೀಯತೆಯ ಆತ್ಮೀಕ ನಶೆಯು ಅವಶ್ಯವಾಗಿ ಇರುತ್ತದೆ. ಕೇವಲ ಒಂದು ದಯೆಯಿರುವುದಿಲ್ಲ ಆದರೆ ದಯೆಮತ್ತು ನಶೆ ಎರಡರ

ಸಮತೋಲನೆಯಿರುತ್ತದೆ. ಒಂದುವೇಳೆ ಜ್ಞಾನಯುಕ್ತ ದಯೆಯಿಲ್ಲದೆ, ಸಾಧಾರಣ ದಯೆಯಿದ್ದರೆ ಯಾವುದೇ ಆತ್ಮನಪ್ರತಿ ಸೆಳೆತದ ರೂಪದಲ್ಲಿರಬಹುದು ಅಥವಾ ಯಾವುದೇ ನಿರ್ಬಲತೆಯಿಂದ ಅವರಮೇಲೆ ಪ್ರಭಾವಿತರಾಗಬಹುದು ಅಂದಮೇಲೆ ಪ್ರಭಾವಿತರೂ ಆಗಬಾರದು, ತಿರಸ್ಕಾರವೂ ಇರಬಾರದು ಏಕೆಂದರೆ ತಾವು ತನು, ಮನ, ಬುದ್ಧಿಯ ಸಹಿತ ತಂದೆಗೆ ಪ್ರಭಾವಿತರಾಗಿಬಿಟ್ಟಿದ್ದೀರಿ. ಯಾವಾಗ ಮನಸ್ಸು-ಬುದ್ಧಿಯು ಒಬ್ಬನ ಕಡೆ ಮತ್ತು ಶ್ರೇಷ್ಠಾತಿಶ್ರೇಷ್ಠತೆಯ ಕಡೆ ಪ್ರಭಾವಿತವಾಗಿಬಿಟ್ಟಿದೆ ಅಂದಮೇಲೆ ಮತ್ತೆ ಅನ್ಯರಮೇಲೆ ಪ್ರಭಾವಿತರಾಗಲು ಹೇಗೆ ಸಾಧ್ಯ? ಒಂದುವೇಳೆ ಅನ್ಯರ ಮೇಲೆ ಪ್ರಭಾವಿತರಾದರೆ ಅವರಿಗೆ ಏನು ಹೇಳುವುದು? ಕೊಟ್ಟಿರುವ ವಸ್ತುವನ್ನು ಪುನಃ ಹೇಗೆ ತಾನೇ ಉಪಯೋಗಿಸುವುದು ಎಂದರೆ ಪ್ರಭುಪ್ರಸಾದವನ್ನು ತನ್ನದೆಂದು ಹೇಳುವುದಾಗಿದೆ. ಯಾವಾಗ ಮನಸ್ಸು-ಬುದ್ಧಿಯನ್ನು ಕೊಟ್ಟುಬಿಟ್ಟಿದ್ದೀರಿ ಅಂದಮೇಲೆ ಮತ್ತೆ ಎಲ್ಲಿಯಾದರೂ ಪ್ರಭಾವಿತರಾಗಲು ಅದು ತಮ್ಮದೇನು? ತಂದೆಗೆ ಅರ್ಪಣೆ ಮಾಡಿಬಿಟ್ಟಿದ್ದೀರೋ ಅಥವಾ ಅರ್ಧಕೊಟ್ಟು ಅರ್ಧ ಇಟ್ಟುಕೊಂಡಿದ್ದೀರೋ? ಯಾರು ಪೂರ್ಣ ಕೊಟ್ಟುಬಿಟ್ಟಿದ್ದೀರಿ ಅವರು ಕೈಯೆತ್ತಿರಿ. ನೋಡಿ, ಬ್ರಾಹ್ಮಣ ಜೀವನದ ತಳಹದಿ, ಮಹಾಮಂತ್ರ ಯಾವುದಾಗಿದೆ? ಮನ್ಮನಾಭವ, ಅಂದಮೇಲೆ ಇನ್ನೂ ಮನ್ಮನಾಭವ ಆಗಿಲ್ಲವೆ? ಜ್ಞಾನಸಹಿತ ದಯಾಹೃದಯಿ ಅತ್ಮನು ಎಂದೂ ಯಾರದೇ ಗುಣಗಳ ಮೇಲಾಗಲಿ, ಸೇವೆಗಾಗಲಿ ಯಾವುದೇ ಪ್ರಕಾರದ ಸಹಯೋಗವು ಪ್ರಾಪ್ತಿಯಾಗುವ ಕಾರಣ ಆ ಆತ್ಮನಪ್ರತಿ ಪ್ರಭಾವಿತರಾಗಲು ಸಾಧ್ಯವಿಲ್ಲ ಏಕೆಂದರೆ ಬೆಹದ್ದಿನ ವೈರಾಗಿಗಳಾಗಿರುವ ಕಾರಣ ತಂದೆಯ ಸ್ನೇಹ, ಸಹಯೋಗ, ಜೊತೆ- ಇದಲ್ಲದೆ ಮತ್ತೇನೂ ಅವರಿಗೆ ಕಾಣಿಸುವುದಿಲ್ಲ. ಬುದ್ಧಿಯಲ್ಲಿ ಬರುವುದೇ ಇಲ್ಲ. ನಿಮ್ಮೊಂದಿಗೇ ಏಳುವೆನು, ನಿಮ್ಮೊಂದಿಗೇ ಮಲಗುವೆನು. ನಿಮ್ಮೊಂದಿಗೇ ತಿನ್ನುವೆನು. ನಿಮ್ಮೊಂದಿಗೇ ಸೇವೆ ಮಾಡುವೆನು. ನಿಮ್ಮ ಜೊತೆಯೇ ಕರ್ಮಯೋಗಿ ಆಗಿರುವೆನು - ಇದೇ ಸ್ಮೃತಿಯು ಸದಾ ಆ ಆತ್ಮಕ್ಕೆ ಇರುತ್ತದೆ. ಭಲೆ ಯಾವುದೇ ಶ್ರೇಷ್ಠ ಆತ್ಮನ ಮೂಲಕ ಸಹಯೋಗವು ಸಿಗಲೂಬಹುದು, ಆದರೆ ಅದಕ್ಕೂ ದಾತ ಯಾರು? ಒಬ್ಬ ತಂದೆಯ ಕಡೆಯೇ ಬುದ್ಧಿಯು ಹೋಗುವುದಲ್ಲವೇ? ಸಹಯೋಗವನ್ನು ಖಂಡಿತ ತೆಗೆದುಕೊಳ್ಳಿ ಆದರೆ ದಾತ. ಯಾರೆಂಬುದನ್ನು ಮರೆಯಬೇಡಿ. ಶ್ರೀಮತವು ಒಬ್ಬ ತಂದೆಯದಾಗಿದೆ. ಯಾವುದೇ ನಿಮಿತ್ತ ಆತ್ಮನು ತಮಗೆ ತಂದೆಯ ಶ್ರೀಮತದ ಸ್ಮೃತಿ ತರಿಸುತ್ತಾರೆಂದರೆ ಅದು ಅವರ ಶ್ರೀಮತವೆಂದು ಹೇಳುವುದಿಲ್ಲ ಆದರೆ ತಂದೆಯ ಶ್ರೀಮತನನ್ನು ಫಾಲೋ ಮಾಡಿ ಅನ್ಯರಿಗೂ ಫಾಲೋ ಮಾಡಿಸುವುದಕ್ಕಾಗಿ ಸ್ಮೃತಿ ತರಿಸುತ್ತಾರೆ. ನಿಮಿತ್ತ ಆತ್ಮರು ಶ್ರೇಷ್ಠಆತ್ಮರು ಎಂದೂ ಸಹ ನನ್ನ ಮತದಂತೆ ನಡೆಯಿರಿ ಎಂದು ಹೇಳುವುದಿಲ್ಲ. ನನ್ನ ಮತವೇ ಶ್ರೀಮತವಾಗಿದೆ ಎಂಬುದನ್ನೂ ಹೇಳುವುದಿಲ್ಲ. ಶ್ರೀಮತವನ್ನೇ ಪುನಃ ಸ್ಮೃತಿ ತರಿಸುತ್ತಾರೆ. ಇದಕ್ಕೆ ಯಥಾರ್ಥ ಸಹಯೋಗ ಪಡೆಯುವುದು ಮತ್ತು ಸಹಯೋಗ ನೀಡುವುದು ಎಂದು ಹೇಳುತ್ತಾರೆ. ದಾದಿ, ದೀದಿಯರ ಶ್ರೀಮತವೆಂದು ಹೇಳುವುದಿಲ್ಲ. ಕೇವಲ ಶ್ರೀಮತದ ಶಕ್ತಿಯನ್ನು ಸ್ಮೃತಿ ತರಿಸಲು ನಿಮಿತ್ತರಾಗುತ್ತಾರಷ್ಟೇ. ಆದ್ದರಿಂದ ಯಾವುದೇ ಆತ್ಮನಿಗೆ ಪ್ರಭಾವಿತರಾಗಬಾರದು. ಒಂದುವೇಳೆ ಯಾವುದೇ ಮಾತಿನಲ್ಲಿ ಯಾರ ಮೇಲಾದರೂ ಪ್ರಭಾವಿತರಾಗುತ್ತಾರೆಂದರೆ ಭಲೆ ಅವರ ಹೆಸರಿನ ಮಹಿಮೆಯ ಮೇಲಿರಬಹುದು. ರೂಪದ ಮೇಲೆ ಅಥವಾ ಯಾವುದೇ ವಿಶೇಷತೆಯ ಮೇಲೆ ಸೆಳೆತದ ಕಾರಣ ಪ್ರಭಾವಿತರಾದರೆ ಬುದ್ಧಿಯು ಅಲ್ಲಿಯೇ ಸಿಕ್ಕಿಹಾಕಿಕೊಳ್ಳುತ್ತದೆ. ಒಂದುವೇಳೆ ಬುದ್ಧಿಯು ಸಿಲುಕಿಕೊಂಡರೆ ಹಾರುವ ಕಲೆಯಿರಲು ಸಾಧ್ಯವಿಲ್ಲ. ಆಗ ನನ್ನದು ಬಹಳ ಒಳ್ಳೆಯ ಪ್ಲಾನಿಂಗ್ ಬುದ್ಧಿಯಾಗಿದೆ. ನನ್ನ ಜ್ಞಾನವು ಬಹಳ ಸ್ಪಷ್ಟವಾಗಿದೆ. ನನ್ನಂತಹ ಸೇವೆಯನ್ನು ಮತ್ತಾರೂ ಮಾಡಲು ಸಾಧ್ಯವಿಲ್ಲ ನನ್ನದು ಹೊಸ ಆವಿಷ್ಕರಣೆ ಮಾಡುವ ಬುದ್ಧಿ, ನಾನು ಗುಣವಂತನು, ಎಂದು ತನ್ನ ಮೇಲೂ ಪ್ರಭಾವಿತರಾಗುತ್ತಾರೆ. ವಿಶೇಷತೆಯಿದೆ, ಪ್ಲಾನಿಂಗ್ ಬುದ್ಧಿಯಿದೆ ಆದರೆ ಸೇವೆಗೆ ನಿಮಿತ್ತರನ್ನಾಗಿ ಯಾರು ಮಾಡಿದರು? ಸೇವೆಯೆಂದರೆ ಏನೆಂಬುದು ಮೊದಲು ತಿಳಿದಿತ್ತೆ? ಆದ್ದರಿಂದ ಸ್ವ-ಉನ್ನತಿಗಾಗಿ ಯಥಾರ್ಥ ಜ್ಞಾನಯುಕ್ತ ದಯಹೃದಯಿಗಳಾಗುವುದು ಬಹಳ ಅವಶ್ಯಕವಾಗಿದೆ ಆಗ ಈ ಈರ್ಷ್ಯೆ, ತಿರಸ್ಕಾರವು ಸಮಾಪ್ತಿಯಾಗಿಬಿಡುತ್ತದೆ. ತೀವ್ರಗತಿಯ ಕೊರತೆಗೆ ಮೂಲಕಾರಣವು ಇದೇ ಆಗಿದೆ - ಈರ್ಷೆ, ತಿರಸ್ಕಾರ ಅಥವಾ ಪ್ರಭಾವಿತರಾಗುವುದು. ತನ್ನ ಮೇಲಿರಲಿ ಅಥವಾ ಅನ್ಯರ ಮೇಲಿರಲಿ. ನಾಲ್ಕನೆಯ ಮಾತಾಗಿದೆ- ಉದಾಸೀನತೆ. ಇದು ನಡೆದೇ ನಡೆಯುತ್ತದೆ, ಸಮಯದಲ್ಲಿ ತಯಾರಾಗಿಬಿಡುತ್ತೇವೆ ಎಂಬುದು ಉದಾಸೀನತೆಯಾಗಿದೆ. ಬಾಪ್‌ದಾದಾ ಒಂದು ಹಾಸ್ಯದ ಮಾತನ್ನು

ಮೊದಲೂ ತಿಳಿಸಿದ್ದಾರೆ - ಬ್ರಾಹ್ಮಣ ಆತ್ಮರ ದೂರದ ದೃಷ್ಟಿಯು ಬಹಳ ತೀಕ್ಷ್ಣವಾಗಿದೆ ಮತ್ತು ಸಮೀಪ ದೃಷ್ಟಿಯು ಸ್ವಲ್ಪ ನಿರ್ಬಲವಾಗಿದೆ ಆದ್ದರಿಂದ ಅನ್ಯರ ಕೊರತೆಗಳು ಬಹುಬೇಗನೆ ಕಂಡುಬರುತ್ತವೆ ಮತ್ತು ತನ್ನ ಕೊರತೆಯು ಬಹಳ ತಡವಾಗಿ ಕಾಣುತ್ತದೆ.

ಆದ್ದರಿಂದ ಪ್ರೇಮಸಾಗರರು ಆಗಿರಬೇಕು ಮತ್ತು ದಯಾಸಾಗರರು ಕೂಡ ಆಗಿರಬೇಕು. ಇದರಿಂದ ಹೃದಯದ ವೈರಾಗ್ಯ ಬರುವುದು. ಯಾವ ಸಮಯದಲ್ಲಿ ಕೇಳುವರೊ ಅಥವಾ ಭಟ್ಟಿಯಲ್ಲಿರುವರೋ ವಾರ್ತಾಲಾಪ ನಡೆಯುತ್ತದೆಯೋ ಆ ಸಮಯದಲ್ಲಿ ಇದೇ ರೀತಿ ಮಾಡಬೇಕೆಂದು ಎಲ್ಲರೂ ತಿಳಿದುಕೊಳ್ಳುತ್ತಾರೆ. ಆದರೆ ಅದು ಅಲ್ಪಕಾಲದ ವೈರಾಗ್ಯ ಬರುತ್ತದೆಯೇ ಹೊರತು ಹೃದಯದ ವೈರಾಗ್ಯವಲ್ಲ. ಯಾವುದು ತಂದೆಗೆ ಇಷ್ಟವಾಗುವುದಿಲ್ಲವೋ ಅದರೊಂದಿಗೆ ಹೃದಯದ ವೈರಾಗ್ಯ ಬರಬೇಕು. ಅದು ತನಗೂ ಇಷ್ಟವಾಗುವುದಿಲ್ಲ ಎಂದರೆ ಬೇಹದ್ದಿನ ವೈರಾಗ್ಯ ವೃತ್ತಿಯ ಉಳುಮೆ ಮಾಡಿರಿ. ದಯಾಹೃದಯಿಗಳಾಗಿರಿ. **ಕೆಲವು ಮಕ್ಕಳು ಬಹಳ ಒಳ್ಳೊಳ್ಳೆಯ ಮಾತುಗಳನ್ನು ತಿಳಿಸುತ್ತಾರೆ. ಹೇಳುತ್ತಾರೆ- ಯಾರಾದರೂ ಸುಳ್ಳು ಹೇಳಿದರೆ ಆಗ ಬಹಳ ಕೋಪ ಬರುತ್ತದೆ. ಸುಳ್ಳು ಹೇಳಿದಾಗ ಕೋಪ ಬರುತ್ತದೆ ಅಥವಾ ಯಾರಾದರೂ ತಪ್ಪು ಮಾಡಿದಾಗ ಕೋಪ ಬರುತ್ತದೆ. ಹಾಗೆಯೇ ಬರುವುದಿಲ್ಲ ಎಂದು ಹೇಳುತ್ತಾರೆ. ಅವರಂತೂ ಸುಳ್ಳು ಹೇಳಿದರು. ಅದನ್ನು ತಪ್ಪೆಂದು ತಿಳಿಯುತ್ತೀರಿ ಮತ್ತು ತಾವು ಅದಕ್ಕಾಗಿ ಕೋಪಿಸಿಕೊಳ್ಳುತ್ತೀರೆಂದರೆ ಇದು ಸರಿಯೇ? ತಪ್ಪು ಮಾಡುವವರು ತಪ್ಪು ಮಾಡುವವರಿಗೆ ಹೇಗೆ ತಿಳಿಸುವಿರಿ? ಅದರ ಪ್ರಭಾವ ಬೀರುವುದೇ? ಆ ಸಮಯದಲ್ಲಿ ತನ್ನ ತಪ್ಪನ್ನು ನೋಡಿಕೊಳ್ಳುವುದಿಲ್ಲ ಆದರೆ ಅನ್ಯರ ಸುಳ್ಳಿನ ಚಿಕ್ಕಮಾತನ್ನೂ ಸಹ ದೊಡ್ಡದು ಮಾಡಿಬಿಡುತ್ತಾರೆ. ಅಂತಹ ಸಮಯದಲ್ಲಿ ದಯಾಹೃದಯಿಗಳಾಗಿರಿ. ತನಗೆ ಪ್ರಾಪ್ತಿಯಾಗಿರುವ ತಂದೆಯ ಶಕ್ತಿಯ ಮೂಲಕ ದಯಾಹೃದಯಿಗಳಾಗಿರಿ**, ಸಹಯೋಗ ನೀಡಿರಿ. ಲಕ್ಷ್ಯವನ್ನು ಚೆನ್ನಾಗಿ ಇಟ್ಟುಕೊಳ್ಳುತ್ತಾರೆ- ಅವರನ್ನು ಸುಳ್ಳು ಹೇಳುವುದರಿಂದ ಬಿಡಿಸುತ್ತಿದ್ದೇವೆಂದು ತಿಳಿಯುತ್ತಾರೆ. ಲಕ್ಷ್ಯವು ಚೆನ್ನಾಗಿದೆ ಅದಕ್ಕಾಗಿ ಶುಭಾಷಯಗಳು ಆದರೆ ಫಲಿತಾಂಶವೇನು ಬಂದಿತು? ಅವರೂ ಫೇಲ್, ತಾವೂ ಫೇಲ್ ಆದಿರಿ ಅಂದಮೇಲೆ ಫೇಲ್ ಆಗಿರುವವರು ಫೇಲ್‌ನವರನ್ನು ಪಾಸ್ ಮಾಡಿಸಲು ಸಾಧ್ಯವೇ? ಅವರನ್ನು ಸರಿಪಡಿಸುವುದು. ಮುಂದುವರೆಸುವುದು ನಮ್ಮ ಜವಾಬ್ದಾರಿಯಲ್ಲವೆ ಎಂದು ಕೆಲವರು ತಿಳಿದುಕೊಳ್ಳುತ್ತಾರೆ. ಆದರೆ ಜವಾಬ್ದಾರಿಯನ್ನು ನಿಭಾಯಿಸುವವರು ಮೊದಲು ತಮ್ಮ ಜವಾಬ್ದಾರಿಯನ್ನು ಆ ಸಮಯದಲ್ಲಿ ನಿಭಾಯಿಸುತ್ತಿದ್ದೀರೋ ಅಥವಾ ಅನ್ಯರದನ್ನು ನಿಭಾಯಿಸುತ್ತೀರೋ? ಕೆಲವರು ನಿಮಿತ್ತರಾಗುತ್ತಾರೆಂದರೆ ಕಿರಿಯರಿಗಾಗಿ ನಾವು ಜವಾಬ್ದಾರರಾಗಿದ್ದೇವೆ. ಅವರಿಗೆ ಶಿಕ್ಷಣ ಕೊಡಬೇಕು. ಕಲಿಸಿಕೊಡಬೇಕೆಂದು ತಿಳಿದುಕೊಳ್ಳುತ್ತಾರೆ ಆದರೆ ಸದಾ ಇದನ್ನೇ ಆಲೋಚಿಸಿ- ಯಥಾರ್ಥ ಜ್ಞಾನವೇ ಆದಾಯದ ಮೂಲವಾಗುವುದು. ಒಂದುವೇಳೆ ತಾವು ಶಿಕ್ಷಕನ ಜವಾಬ್ದಾರಿಯಿಂದ ಶಿಕ್ಷಣ ಕೊಟ್ಟರಿ ಆದರೆ ಮೊದಲು ಇದನ್ನು ನೋಡಿಕೊಳ್ಳಿ- ಆ ಶಿಕ್ಷಣದಿಂದ ಅನ್ಯರ ಸಂಪಾದನೆಯು ಜಮಾ ಆಯಿತೇ? ಆದಾಯದ ಮೂಲವಾಯಿತೇ ಅಥವಾ ಅವರ ಆದಾಯಕ್ಕೆ ಅಡಚಣೆಯಾಯಿತೆ? ಆದ್ದರಿಂದ ಬಾಪ್‌ದಾದಾ ಸದಾ ಹೇಳುತ್ತೇವೆ- ಯಾವುದೇ ಕರ್ಮ ಮಾಡುತ್ತೀರೆಂದರೆ ತ್ರಿಕಾಲದರ್ಶಿ ಸ್ಥಿತಿಯಲ್ಲಿ ಸ್ಥಿತರಾಗಿ ಮಾಡಿರಿ. ಇವರು ಹೀಗೆ ಮಾಡಿದರು ಆದ್ದರಿಂದ ಹೇಳಿದೆನು ಎಂದು ಕೇವಲ ವರ್ತಮಾನವನ್ನು ನೋಡಬೇಡಿ ಆದರೆ ಅದರ ಭವಿಷ್ಯ ಪರಿಣಾಮವೇನಾಗುವುದು ಎಂಬುದನ್ನೂ ನೋಡಿರಿ. ಬ್ರಾಹ್ಮಣ ಆತ್ಮರದು ಹಿಂದಿನ ಆದಿ- ಅನಾದಿ ಯಾವ ಸ್ಥಿತಿಯಿತ್ತು ಈಗಲೂ ಇದೆ ಮತ್ತು ಮುಂದೆಯೂ ಇರುತ್ತದೆಯೋ - ಅದೇ ಪ್ರಮಾಣವಿದೆಯೇ? ಮೂರೂಕಾಲಗಳನ್ನು ಪರಿಶೀಲನೆ ಮಾಡಿಕೊಳ್ಳಿರಿ, ಬಾಪ್‌ದಾದಾ ಏನೆಂದು ಬಯಸುತ್ತಾರೆಂದು ತಿಳಿಯಿತೇ?

ಸ್ವ-ಉನ್ನತಿಯನ್ನಂತೂ ಮಾಡಿಕೊಳ್ಳುತ್ತೀರಿ ಆದರೆ ಯಾವ ಪರಿವರ್ತನೆಯನ್ನು ತರುತ್ತೀರಿ? ಮಹಾರಥಿಗಳಿರಲಿ ಹೊಸಬರಿರಲಿ ಬಾಪ್‌ದಾದಾರವರದು ಒಂದೇ ಶುಭಆಸೆಯಾಗಿದೆ. ಎಷ್ಟನ್ನು ಬಯಸುತ್ತಾರೆಯೋ ಅಷ್ಟು ಇನ್ನೂ ಆಗಿಲ್ಲ. ಫಲಿತಾಂಶವನ್ನಂತೂ ತಿಳಿಸುತ್ತೇವೆ ಅಲ್ಲವೆ. ಬಾಪ್‌ದಾದಾ ಅಲ್ಪಜ್ಞಾನದ ವೈರಾಗ್ಯವನ್ನು ಬಯಸುವುದಿಲ್ಲ. ನಿಜವಾದ ವೈರಾಗ್ಯ ಬರಲಿ- ಯಾವುದು ತಂದೆಗೆ ಇಷ್ಟವಾಗುವುದಿಲ್ಲವೋ ಅದನ್ನು ಮಾಡಬಾರದು. ಆಲೋಚಿಸಬಾರದು. ಹೇಳಬಾರದು. ಇದಕ್ಕೆ

ಹೃದಯದ ಪ್ರೀತಿಯೆಂದು ಬಾಪ್‌ದಾದಾ ಹೇಳುತ್ತಾರೆ. ಈಗಿನ್ನೂ ಅದು ಬೆರಕೆಯಿದೆ. ಕೆಲವೊಮ್ಮೆ ಹೃದಯದ ಪ್ರೀತಿ. ಕೆಲವೊಮ್ಮೆ ಬುದ್ಧಿಯ ಪ್ರೀತಿಯಿದೆ. ಮಾಲೆಯ ಪ್ರತಿಯೊಂದು ಮಣಿಯು, ಮಣಿಯ ಜೊತೆ ಸಮೀಪ ಇರಲಿ, ಸ್ನೇಹಿಯಾಗಿರಲಿ. ಪ್ರಗತಿಗಾಗಿ ಸಹಯೋಗಿಯಾಗಿರಬೇಕು ಆದರೆ ಅದು ಆಗಿಲ್ಲ ಆದ್ದರಿಂದ ಮಾಲೆಯು ಇನ್ನೂ ತಯಾರಾಗದೇ ನಿಂತಿದೆ. ಏಕೆಂದರೆ ಮಾಲೆಯು ತಯಾರಾಗುವುದು ಎಂದರೆ ಜೋಡಿಮಣಿಗಳ ಸಮಾನ ಒಬ್ಬರು ಇನ್ನೊಬ್ಬರಿಗೆ ಸಮೀಪ ಸ್ನೇಹಿಗಳಾಗುವುದು. ಮೊದಲು 108ರ ಮಾಲೆಯು ತಯಾರಾಗಲಿ ಆಗ ಇನ್ನೊಂದು ತಯಾರಾಗುವುದು. ಬಾಪ್‌ದಾದಾ ಅನೇಕಬಾರಿ ಮಾಲೆಯನ್ನು ತಯಾರು ಮಾಡಲು ಕುಳಿತುಕೊಳ್ಳುತ್ತಾರೆ ಆದರೆ ಈಗಿನ್ನೂ ಪೂರ್ಣವಾಗಿಲ್ಲ. ಆ ಮಣಿಗೆ ಮೂರು ಪ್ರಶಸ್ತಿಗಳು ಸಿಕ್ಕಿದಾಗ ಮಣಿಯು ಮಣಿಯ ಸಮೀಪ ಬರುತ್ತದೆ ಅರ್ಥಾತ್ ಅದನ್ನು ತಂದೆಯು ಪೋಣಿಸುತ್ತಾರೆ.

ಮೂರು ಪ್ರಶಸ್ತಿಗಳಾಗಿವೆ-ಪ್ರಭುಪ್ರಿಯ, ಬ್ರಾಹ್ಮಣ ಪರಿವಾರಪ್ರಿಯ ಮತ್ತು ತನ್ನ ಯಥಾರ್ಥ ಪುರುಷಾರ್ಥ ಪ್ರಿಯ. ಮೂರೂ ಮಾತುಗಳನ್ನು ಪರಿಶೀಲನೆ ಮಾಡಿದಾಗ ಮಣಿಯು ಕೈಯಲ್ಲಿಯೇ ಉಳಿದುಕೊಳ್ಳುತ್ತದೆ. ಮಾಲೆಯಲ್ಲಿ ಬರುವುದಿಲ್ಲ. ಅಂದಮೇಲೆ ಈ ವರ್ಷದಲ್ಲಿ ಯಾವ ಸ್ಲೋಗನ್ ನೆನಪಿಟ್ಟುಕೊಳ್ಳುತ್ತೀರಿ? ತ್ರಿಮೂರ್ತಿ ತಂದೆ ಮತ್ತು ವಿಶೇಷ ಮೂರು ಸಂಬಂಧಗಳ ಮೂಲಕ ಮೂರು ಪ್ರಶಸ್ತಿಗಳನ್ನು ತೆಗೆದುಕೊಳ್ಳಬೇಕಾಗಿದೆ ಮತ್ತು ಅನ್ಯರಿಗೂ ಕೊಡಿಸುವುದರಲ್ಲಿ ಸಹಯೋಗಿಗಳಾಗಬೇಕಾಗಿದೆ. ಮಾಲೆಯ ಸಮೀಪ ಮಣಿಯಾಗಲೇಬೇಕಾಗಿದೆ. ಅಂದಾಗ ಸ್ವ-ಉನ್ನತಿ ಏನು ಮಾಡಿಕೊಳ್ಳಬೇಕೆಂದು ಕೇಳಿಸಿಕೊಂಡಿರಾ? ಹೇಗೆ ಬ್ರಹ್ಮಾತಂದೆಯ ತಳಹದಿ ನಂಬರ್‌ವನ್ ಪರಿವರ್ತನೆಯಲ್ಲಿ ಯಾವುದಾಗಿತ್ತು? ಬೇಹದ್ದಿನ ವೈರಾಗ್ಯ. ಯಾವುದನ್ನು ತಂದೆಯು ಹೇಳಿದರು ಅದನ್ನು ಬ್ರಹ್ಮನು ಮಾಡಿದರು. ಆದ್ದರಿಂದ ವಿನ್ ಮಾಡಿ ವನ್ ಆಗಿಬಿಟ್ಟರು. ಒಳ್ಳೆಯದು-

ಬಾಪ್‌ದಾದಾ ಈ ಫಲಿತಾಂಶವನ್ನು ನೋಡುತ್ತೇವೆ. ಪ್ರತಿಯೊಬ್ಬರು ತನ್ನನ್ನು ನೋಡಿಕೊಳ್ಳಿ. ಅನ್ಯರನ್ನಲ್ಲ. ಇಂದು ಸೀಜನ್ನಿನ ಕೊನೆಯ ದಿನವಾಗಿದೆ ಎಂದು ಕೆಲವರು ತಿಳಿದುಕೊಳ್ಳುತ್ತಾರೆ ಆದರೆ ಬಾಪ್‌ದಾದಾ ಹೇಳುತ್ತೇವೆ- ಇದು ಕೊನೆಯ ದಿನವಲ್ಲ. ಮಾಲೆಯಾಗುವ ಫಸ್ಟ್ ಸೀಜನ್‌ನ ದಿನವಾಗಿದೆ. ಎಲ್ಲರಿಗೆ ಅವಕಾಶವಿದೆ. ಈಗಿನ್ನೂ ಮಾಲೆಯ ಮಣಿಗಳನ್ನು ಪೋಣಿಸಿಲ್ಲ. ನಿಗಧಿಯಾಗಿಲ್ಲ. ಮೂರುಪ್ರಶಸ್ತಿಗಳನ್ನು ತೆಗೆದುಕೊಳ್ಳಿ ಮತ್ತು ಮಾಲೆಯಲ್ಲಿ ಮಣಿಯಾಗಿರಿ. ಎಷ್ಟು ಪ್ರತ್ಯಕ್ಷ ಚಹರೆ ಮತ್ತು ಚಲನೆಯಲ್ಲಿ ಪ್ರತ್ಯಕ್ಷ ಪ್ರಮಾಣ ಕಾಣುವುದೋ ಅಷ್ಟು ಪುನಃ ಹೊಸರಂಗನ್ನು ನೋಡುತ್ತೀರಿ. ಒಂದುವೇಳೆ ತಾವೂ ಸಹ ಅವರಂತೆಯೇ ಇದ್ದರೆ ಬಣ್ಣವೂ ಸಹ ಅದೇರೀತಿ ಇರುತ್ತದೆ ಆದ್ದರಿಂದ ತಮ್ಮಲ್ಲಿ ನವೀನತೆಯನ್ನು ತನ್ನಿರಿ. ಪರಿವಾರದಲ್ಲಿಯೂ ತೀವ್ರಪುರುಷಾರ್ಥದ ಅಲೆಯನ್ನು ತನ್ನಿರಿ. ನಂತರ ಮುಂದೆ ಹೋದಂತೆ ಎಷ್ಟೊಂದು ಅದ್ಭುತ ದೃಶ್ಯಗಳನ್ನು ನೋಡುವಿರಿ. ಇಲ್ಲಿಯವರೆಗೆ ಏನಾಯಿತೋ ಅದು ಕಳೆದುಹೋಯಿತು. ಈಗ ಪ್ರತೀ ಕರ್ಮದಲ್ಲಿ ಹೊಸಉತ್ಸಾಹ-ಹೊಸ ಉಲ್ಲಾಸಗಳೆಂಬ ಈ ರೆಕ್ಕೆಗಳಿಂದ ಹಾರುತ್ತಾ ಹೋಗಿ.

ಯಾರೆಲ್ಲಾ ಸೇವೆಯಲ್ಲಿ ಸಹಯೋಗ ನೀಡಿದಿರೋ ಅವರು ತಮ್ಮ ಭಾಗ್ಯವನ್ನು ಜಮಾ ಮಾಡಿಕೊಂಡಿರಿ. ಬಹಳ ಚೆನ್ನಾಗಿ ಮಾಡಿದ್ದೀರಿ. ಭಲೆ ದೇಶ-ವಿದೇಶದ ನಾಲ್ಕಾರು ಕಡೆಯ ಸೇವಾಧಾರಿಗಳು ಸೇವೆ ಮಾಡಿದಿರಿ ಆದ್ದರಿಂದ ಸೇವಾಧಾರಿಗಳಿಗೆ ಬಾಪ್‌ದಾದಾ ಸದಾ ಇದನ್ನೇ ಹೇಳುತ್ತಾರೆ- ಸೇವಾಧಾರಿ ಅರ್ಥಾತ್ ಸುವರ್ಣಾವಕಾಶದ ಭಾಗ್ಯವನ್ನು ತೆಗೆದುಕೊಳ್ಳುವವರು. ಈಗ ಇದೇ ಭಾಗ್ಯವನ್ನು ಎಲ್ಲಿ ಹೋದರೂ ಸಹ ಅಲ್ಲಿ ಹೆಚ್ಚಿಸಿಕೊಳ್ಳುತ್ತಾ ಇರಿ. ಕಡಿಮೆಯಾಗಲು ಬಿಡಬೇಡಿ. ಸ್ವಲ್ಪ ಸಮಯದ ಅವಕಾಶವು ಸದಾಕಾಲಕ್ಕಾಗಿ ತೀವ್ರಪುರುಷಾರ್ಥದ ಸುವರ್ಣಾವಕಾಶವನ್ನು ತರುತ್ತಾ ಇರುವುದು. ಸೇವಾಧಾರಿಗಳು ಯಾರೆಲ್ಲಾ ಹೊರಟುಹೋಗಿದ್ದಾರೆ ಅಥವಾ ಹೋಗುವವರಿದ್ದಾರೆಯೋ ಎಲ್ಲರಿಗೆ ಶುಭಾಷಯಗಳು. ಒಳ್ಳೆಯದು-

**ಸರ್ವದಯಾಹೃದಯಿ ಶ್ರೇಷ್ಠಾತ್ಮರಿಗೆ, ಸದಾ ಸ್ವಯಂನ್ನು ಸ್ವ-ಉನ್ನತಿಯ ಹಾರುವಕಲೆಯಲ್ಲಿ ತೆಗೆದುಕೊಂಡು ಹೋಗುವ ತೀವ್ರಪುರುಷಾರ್ಥಿ ಆತ್ಮರಿಗೆ, ಸದಾ ಪ್ರತೀ ಸಮಯ ಒಬ್ಬ ತಂದೆಯನ್ನು ಜೊತೆ ಅನುಭವ ಮಾಡುವಂತಹ ಅನುಭವೀ ಆತ್ಮರಿಗೆ, ಸದಾ ತಂದೆಯ ಹೃದಯದ ಆಸೆಗಳನ್ನು ಪೂರ್ಣ ಮಾಡುವಂತಹ ಕುಲದೀಪಕ ಆತ್ಮರಿಗೆ. ಸದಾ ತನ್ನನ್ನು ಮಾಲೆಯ ಸಮೀಪ**

**ಮಣಿಯನ್ನಾಗಿ ಮಾಡಿಕೊಳ್ಳುವ ವಿಜಯೀ ಆತ್ಮರಿಗೆ, ಬೇಹದ್ದಿನ ವೈರಾಗ್ಯವೃತ್ತಿಯಿಂದ ಪ್ರತೀ ಸಮಯ ತಂದೆಯನ್ನು ಫಾಲೋ ಮಾಡಿ ತಂದೆಯ ಸಮಾನರಾಗುವಂತಹ ಅತಿಸ್ನೇಹಿ, ಬಲಭುಜ ಮಕ್ಕಳಿಗೆ ಬಾಪ್‌ದಾದಾರವರ ನೆನಪು, ಪ್ರೀತಿ ಹಾಗೂ ನಮಸ್ತೆ.**

ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 31-03-1990.

***ದಯಾ ಹೃದಯ ಹಾಗೂ ಬೇಹದ್ದಿನ ವೈರಾಗ್ಯ ವೃತ್ತಿ***

ಜ್ಞಾನಯುಕ್ತವಾದ ದಯೆ ಯಾವಾಗಲೂ, ಯಾವ ಆತ್ಮನ ಪ್ರತಿಯೂ ಈರ್ಷ್ಯೆ ಅಥವಾ ತಿರಸ್ಕಾರ ಭಾವನೆಯನ್ನು ಹೃದಯದಲ್ಲಿ ಉತ್ಪನ್ನ ಆಗಲು ಬಿಡುವುದಿಲ್ಲ. ಜ್ಞಾನಯುಕ್ತವಾದ ದಯೆಯ ಜೊತೆಗೆ ಸ್ವಯಂನ ಆತ್ಮೀಯತೆಯ ಆತ್ಮಿಕ ನಶೆಯು ಇರಬೇಕು ಕೇವಲ ದಯೆ ಮಾತ್ರ ಇರುವುದಿಲ್ಲ ದಯೆ ಮತ್ತು ಆತ್ಮಿಕ ನಶೆ ಎರಡರ ಸಮತೋಲನವಿರುತ್ತದೆ. ಒಂದು ವೇಳೆ ಜ್ಞಾನಯುಕ್ತ ದಯೆ ಅಲ್ಲದೆ ಸಾಧಾರಣ ದಯೆ ಇದ್ದರೆ, ಯಾವುದೇ ಆತ್ಮನ ಪ್ರತಿ ಸೆಳೆತದ ರೂಪದಲ್ಲಿ ಇರಬಹುದು ಅಥವಾ ಯಾವುದೇ ನಿರ್ಬಲತೆಯಿಂದ ಅವರ ಮೇಲೆ ಪ್ರಭಾವಿತರಾಗಿರಬಹುದು. ಅಂದಮೇಲೆ ಪ್ರಭಾವಿತರೂ ಆಗಬಾರದು, ತಿರಸ್ಕಾರವೂ ಇರಬಾರದು, ಎಂದು ಹೇಳುತ್ತಾ ಶಿವಪರಮಾತ್ಮ ಹೇಳಿರುವ ಮಹಾ ವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

1. ನಾನು ಮಾಸ್ಟರ್ ದಯಾಸಾಗರನು.

2. ನಾನು ಬಹಳ ಉನ್ನತೋನ್ನತವಾದ ತಂದೆಯ ಆತ್ಮನು, ತಂದೆ ಸಮಾನವಾಗಬೇಕೆಂಬ ಲಕ್ಷ್ಯಧಾರಿ.

3. ನಾನು ತಂದೆಯೊಂದಿಗೆ ಎದ್ದೇಳುತ್ತೇನೆ, ತಂದೆಯೊಂದಿಗೆ ಮಲಗುತ್ತೇನೆ, ತಂದೆಯೊಂದಿಗೆ ತಿನ್ನುತ್ತೇನೆ, ತಂದೆಯೊಂದಿಗೆ ಸೇವೆ ಮಾಡುತ್ತೇನೆ, ತಂದೆಯೊಂದಿಗೆ ಕರ್ಮಯೋಗಿಯೂ ಆಗುತ್ತೇನೆ.

4. ನಾನು ಪ್ರೇಮಸಾಗರನು ಮತ್ತು ದಯಾಸಾಗರನು.

5. ನಾನು ಯಾವ ಕಾರ್ಯ ಮಾಡಿದರೂ ತ್ರಿಕಾಲದರ್ಶಿ ಸ್ಥಿತಿಯಲ್ಲಿದ್ದು ಮಾಡುತ್ತಿದ್ದೇನೆ.

6. ತಂದೆಗೆ ಇಷ್ಟವಾಗದೇ ಇರುವುದು ನಾನು ಮಾಡುವುದಿಲ್ಲ, ಯೋಚಿಸುವುದಿಲ್ಲ, ಮಾತನಾಡುವುದಿಲ್ಲ.

7. ನಾನು ತಂದೆಗೆ ಪ್ರಿಯವಾಗಿ, ಬ್ರಾಹ್ಮಣ ಪರಿವಾರಕ್ಕೆ ಪ್ರಿಯವಾಗಿ, ನನ್ನ ಯಥಾರ್ಥ ಪುರುಷಾರ್ಥಕ್ಕೆ ಪ್ರಿಯವಾಗಿ ಇದ್ದೇನೆ.